**ಪೊಲೀಸ್ ಮಹಾ ನಿರ್ದೇಶಕರು**
**ಹಾಗೂ ಮಹಾ ನಿರ್ದೇಶಕರು**
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು
ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ
ಪಡೆಯ ನಿರ್ದೇಶನಾಲಯ
ನಂ. 1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು – 560 042

ದೂರವಾಣಿ : 080 25570733
22971501
22971507
ಫ್ಯಾಕ್ಸ್ : 22942108

ಸಂಖ್ಯೆ: ಜಿಬಿಸಿ(2)1457/2024

ದಿನಾಂಕ:14-08-2024

ಗೆ,
ಕಾರ್ಯದರ್ಶಿ,
ಮೆ॥ ಗ್ಲೋಬಲ್ ಹೆಲ್ತ್ & ಎಜುಕೇಷನಲ್ ಟ್ರಸ್ಟ್,
ನಂ.23/24, ಸಾಯಿ ಬಾಬ ನಗರ,
ಅಂಧ್ರಹಳ್ಳಿ ಮುಖ್ಯ ರಸ್ತೆ,
ಯಶವಂತಪುರ ಹೋಬಳಿ,
ಬೆಂಗಳೂರು-560091.

ಮಾನ್ಯರೆ,

ವಿಷಯ: ಬೆಂಗಳೂರು ನಗರ, ಯಶವಂತಪುರ ಹೋಬಳಿ, ವಿಶ್ವನೀಡಂ ಅಂಚೆ, ಆಂಧ್ರಹಳ್ಳಿ, ಸಾಯಿಬಾಬ ನಗರ, ನಂ.23/24 ರಲ್ಲಿ ನಿರ್ಮಿಸಿರುವ **ವಿದ್ಯಾ ಭೂಷಣ್ ಇಂಟರ್‌ನ್ಯಾಷನಲ್ ಸ್ಕೂಲ್** ಶೈಕ್ಷಣಿಕ ಕಟ್ಟಡಕ್ಕೆ ಸಮಾಪನ ಪತ್ರ ನೀಡುವ ಬಗ್ಗೆ.

ಉಲ್ಲೇಖ:1) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ ಸಂ.ಜಿಬಿಸಿ(2)1457/2024 ದಿನಾಂಕ 01-08-2024.
2) ನಿಮ್ಮ ಪತ್ರ ದಿನಾಂಕ 03-08-2024.

<<<<<<>>>>>>>

ಬೆಂಗಳೂರು ನಗರ, ಯಶವಂತಪುರ ಹೋಬಳಿ, ವಿಶ್ವನೀಡಂ ಅಂಚೆ, ಆಂಧ್ರಹಳ್ಳಿ, ಸಾಯಿಬಾಬ ನಗರ, ನಂ.23/24 ಇಲ್ಲಿ ನಿರ್ಮಿಸಿರುವ 20.40 ಮೀಟರ್ ಎತ್ತರದ ನೆಲಹಂತ & 5 ಮೇಲಂತಸ್ತುಗಳನ್ನು ಹೊಂದಿರುವ **ವಿದ್ಯಾ ಭೂಷಣ್ ಇಂಟರ್‌ನ್ಯಾಷನಲ್ ಸ್ಕೂಲ್** ಶೈಕ್ಷಣಿಕ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ 01-08-2024 ರಂದು ನಿಮ್ಮ ಕೋರಿಕೆಯಂತೆ ಸಲಹಾ ಪತ್ರ ನೀಡಲಾಗಿದೆ.

ಉಲ್ಲೇಖ (2)ರ ನಿಮ್ಮ ಪತ್ರದಲ್ಲಿ, ಸದರಿ ಶೈಕ್ಷಣಿಕ ಕಟ್ಟಡದಲ್ಲಿ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಮಾಪನ ಪತ್ರ ನೀಡುವಂತೆ ಕೋರಿರುವಿರಿ.

ನಿಮ್ಮ ಕೋರಿಕೆಯಂತೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಧಿಕಾರಿಗಳು ದಿನಾಂಕ 08-08-2024 ರಂದು ಬೆಂಗಳೂರು ನಗರ, ಯಶವಂತಪುರ ಹೋಬಳಿ, ವಿಶ್ವನೀಡಂ ಅಂಚೆ, ಆಂಧ್ರಹಳ್ಳಿ, ಸಾಯಿಬಾಬ ನಗರ, ನಂ.23/24 ಇಲ್ಲಿ ನಿರ್ಮಿಸಿರುವ ಶೈಕ್ಷಣಿಕ ಕಟ್ಟಡವನ್ನು ಪರಿವೀಕ್ಷಣೆ ಮಾಡಿ, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ಸಲಹಾ ಪತ್ರದಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ, ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಶೈಕ್ಷಣಿಕ ಕಟ್ಟಡದಲ್ಲಿ ಪೂರ್ಣವಾಗಿ ಅನುಷ್ಟಾನಗೊಳಿಸಿರುವುದಾಗಿ ಹಾಗೂ ಸದರಿ ಕಟ್ಟಡದಲ್ಲಿನ ನೌಕರರು/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿ ಇರುವುದಾಗಿ ಹಾಗೂ ಸದರಿ ಕಟ್ಟಡದ ಸಮಾಪನ ಪತ್ರ ತರುವಾಯ ಅದರಲ್ಲಿನ ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ವ್ಯವಸ್ಥಿಸಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಚೇರಿ ಬೆಂಗಳೂರು 560042

14/8/24

ಆದ್ದರಿಂದ ಬೆಂಗಳೂರು ನಗರ, ಯಶವಂತಪುರ ಹೋಬಳಿ, ವಿಶ್ವನೀಡಂ ಅಂಚೆ, ಆಂಧ್ರಹಳ್ಳಿ, ಸಾಯಿಬಾಬ ನಗರ, ನಂ.23/24 ರಲ್ಲಿ ನಿರ್ಮಿಸಿರುವ 20.40 ಮೀಟರ್ ಎತ್ತರದ ನೆಲಹಂತ & 5 ಮೇಲಂತಸ್ತುಗಳನ್ನು ಹೊಂದಿರುವ **ವಿದ್ಯಾ ಭೂಷಣ್ ಇಂಟರ್‌ನ್ಯಾಷನಲ್ ಸ್ಕೂಲ್** ಶೈಕ್ಷಣಿಕ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ ಸಂಖ್ಯೆ ಜಿಬಿಸಿ(2)1457/2024 ದಿನಾಂಕ: 01-08-2024 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹಾಗೂ ನಿಮ್ಮ ದಿನಾಂಕ 12-08-2024 ಮುಚ್ಚಳಿಕೆ ಪತ್ರದಲ್ಲಿ ಒಪ್ಪಿರುವಂತೆ, ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಹಾಗೂ ಕಟ್ಟಡದಲ್ಲಿನ ಶೇಕಡಾ 40 ರಷ್ಟು ಸಿಬ್ಬಂದಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ, ಬೆಂಗಳೂರಿನ ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡಮಿಯಲ್ಲಿ ಸೂಕ್ತ ತರಬೇತಿಯನ್ನು 3 ತಿಂಗಳೊಳಗೆ ಪಡೆಯಲು ವ್ಯವಸ್ಥೆಸಬೇಕೆಂಬ ಷರತ್ತಿನ ಮೇಲೆ ಸಮಾಪನ ವರದಿ ಪ್ರಮಾಣ ಪತ್ರವನ್ನು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ನೀಡಲಾಗಿದೆ.

ಈ ಸಮಾಪನ ಪ್ರಮಾಣ ಪತ್ರವು ಜಾರಿಯಾದ ದಿನಾಂಕದಿಂದ ಮುಂದಿನ ಎರಡು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಸಮಾಪನ ಪ್ರಮಾಣ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.

ಹಾಗೆಯೇ ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಇಲಾಖೆಯ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನ ಉಪಕರಣಗಳು ಸುಸ್ಥಿತಿಯಲ್ಲಿರದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಕಾನೂನಿನ್ವಯ ಸದರಿ ಕಟ್ಟಡದ ಸುತ್ತ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಯಾವುದೇ ಹೆಚ್ಚುವರಿ ರಚನೆಗಳನ್ನು ನಿರ್ಮಾಣ ಮಾಡಿದರೆ, ಅಥವಾ ಯಾವುದೇ ರೀತಿಯ ಖಾಯಂ/ತಾತ್ಕಾಲಿಕ ಅಡಚಣೆಗಳನ್ನು ಉಂಟು ಮಾಡಿದರೆ, ಈ 'ಸಮಾಪನ' ಪ್ರಮಾಣ ಪತ್ರವು ಅನೂರ್ಜಿತಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

ಡಿ.ಜಿ.ಪಿ. ಮತ್ತು ಡಿ.ಜಿ.ರವರಿಂದ
ಕರಡು, ಅನುಮೋದಿಸಲ್ಪಟಿದೆ,

ಕರ್ನಾಟಕ ರಾಜ್ಯ
ಅಗ್ನಿಶಾಮಕ
ಮತ್ತು ತುರ್ತು
ಸೇವೆಗಳ ಕಚೇರಿ
ಬೆಂಗಳೂರು
560042

ತಮ್ಮ ವಿಶ್ವಾಸಿ,

14/8/24

(ಟಿ.ಎನ್.ಶಿವಶಂಕರ)
ನಿರ್ದೇಶಕರು,
ಪೊಲೀಸ್ ಮಹಾ ನಿರ್ದೇಶಕರು
ಹಾಗೂ ಮಹಾ ನಿರ್ದೇಶಕರು,
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
ರವರ ಪರವಾಗಿ